# ಆರೈಕೆ, ಬೆಂಬಲ ಮತ್ತು ಚಿಕಿತ್ಸೆ (ಸಿ.ಎಸ್.ಟಿ.)

ಆಂಟಿ ರಿಟ್ರೋವೈರಲ್ ಥೆರಪಿ "ಎ.ಆರ್.ಟಿ" ಯು ಅಜೀವ ಪರ್ಯಂತ ಪಡೆಯುವ ಚಿಕಿತ್ಸೆಯಾಗಿದ್ದು, ಹೆಚ್.ಐ.ವಿ. ಸೋಂಕಿತರು ಪ್ರತಿ ತಿಂಗಳು ಎ.ಆರ್.ಟಿ ಕೇಂದ್ರದಿಂದ ಔಷಧಿಗಳನ್ನು ಪಡೆಯಬೇಕಾಗುತ್ತದೆ. ನಿಯಮಿತವಾಗಿ ಔಷಧಿ ಸೇವಿಸದಿದ್ದರೆ ರೋಗ ಉಲ್ಬಣಗೊಳ್ಳುವುದಲ್ಲದೆ, ಅವಕಾಶವಾದಿ ಸೋಂಕುಗಳು ತಗಲುವ ಮತ್ತು ಹಾಲಿ ಪಡೆಯುತ್ತಿರುವ ಔಷಧಿಗಳಿಗೆ ನಿರೋಧಕ ಶಕ್ತಿ ಬೆಳೆಯುವ ಸಾಧ್ಯತೆ ಇದೆ. ಈ ಕಾರಣ ಎಆರ್ಟಿ ಚಿಕಿತ್ಸೆ ಪಡೆಯುತ್ತಿರುವ ಹೆಚ್ಐವಿ ಸೋಂಕಿತರ ನಿಯಮಿತ ಔಷಧ ಸೇವನೆಯ ಬದ್ಧತೆಯನ್ನು ಖಾತರಿಪಡಿಸಿಕೊಳ್ಳುವುದು ಅತ್ಯವಶ್ಯಕ.

ಎ.ಆರ್.ಟಿ. ಕೇಂದ್ರದಲ್ಲಿ ನೋಂದಾಯಿತರಾದ ಎಲ್ಲಾ ಹೆಚ್.ಐ.ವಿ. ಸೋಂಕಿತರಿಗೆ ಎ.ಆರ್.ಟಿ. ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಈ ಕೇಂದ್ರಗಳು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ, ತಾಲ್ಲೂಕು ಆಸ್ಪತ್ರೆಯಲ್ಲಿ ಹಾಗೂ ಕೆಲವು ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ಮತ್ತು ಕೆಲವು ಖಾಸಗಿ ಸರ್ಕಾರಿ ಸಹಭಾಗಿತ್ವದ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ನ್ಯಾಕೋ National AIDS Control Organisation) ಸಂಸ್ಥೆಯ ಸಹಯೋಗ, ಸಹಕಾರದೊಂದಿಗೆ ಮತ್ತು ನೆರವಿನಿಂದ ಕರ್ನಾಟಕ ರಾಜ್ಯದಲ್ಲಿ ಏಡ್ಸ್ ಸೋಂಕನ್ನು ತಡೆಗಟ್ಟುವ ಹಾಗೂ ಏಡ್ಸ್ ಸೋಂಕಿತರಿಗೆ ಆರೈಕೆ, ಬೆಂಬಲ ಮತ್ತು ಚಿಕಿತ್ಸೆ ಸೇವೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಪ್ರಸ್ತುತ ಎಲ್ಲಾ ಕಾರ್ಯಕ್ರಮಗಳು ಜಾಗತಿಕ ಧ್ಯೇಯವಾದ "೨೦೨೦ ರೊಳಗಾಗಿ ಸಾರ್ವಜನಿಕ ಆರೋಗ್ಯಕ್ಕೆ ಸವಾಲಾದ ಏಡ್ಸ್ ಸೋಂಕನ್ನು ಅಂತ್ಯಗೊಳಿಸುವ" ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಯೋಜನೆಗೊಳಿಸಿದೆ. ಅದರಂತೆ ೯೦:೯೦:೯೦ (೯೦% ಸೋಂಕಿತರು ತಮ್ಮ ಹೆಚ್.ಐ.ವಿ ಸ್ಥಿತಿಯನ್ನು ಅರಿತಿರಬೇಕು, ಇದರಲ್ಲಿ ೯೦% ಸೋಂಕಿತರು ಏಆರ್ಟಿ ಸೇವೆಗಳಿಗೆ ನೊಂದಣಿಯಾಗಿ ಎ.ಆರ್.ಟಿ. ಚಿಕಿತ್ಸೆಯನ್ನು ನಿರಂತರವಾಗಿ ಪಡೆಯಬೇಕು ಮತ್ತು ಎ.ಆರ್.ಟಿ. ಚಿಕಿತ್ಸೆ ಪಡೆಯುವುವ ಸಮುದಾಯದಲ್ಲಿ ೯೦% ರಷ್ಟು ಜನರಲ್ಲಿ ಹೆಚ್.ಐ.ವಿ.ವೈರಾಣು ನಿಗ್ರಹದಲ್ಲಿ ಬೇಕು) ಕಾರ್ಯಕ್ರಮವನ್ನು ನ್ಯಾಕೋ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲಾಗುತ್ತಿದೆ.

ಹಾಗೆಯೇ ಭಾರತ ಸರ್ಕಾರದ 2019ನೇ ಸಾಲಿನ ಗೆಜೆಟ್ ಅಧಿಸೂಚನೆ ದಿನಾಂಕ: 25.06.2019ರಲ್ಲಿ, ಪ್ರತಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಎ.ಆರ್.ಟಿ ಕೇಂದ್ರಗಳನ್ನು ಪ್ರಾರಂಭಿಸಬೇಕಾಗಿ ಅಧಿಸೂಚನೆ ಹೊರಡಿಸಲಾಗಿದ್ದು. ಅದರಂತೆ ಪ್ರಸ್ತುತ ಎ.ಆರ್.ಟಿ ಕೇಂದ್ರಗಳನ್ನು ಹೊಂದಿರುವ ವೈದ್ಯಕೀಯ ಕಾಲೇಜುಗಳನ್ನು ಹೊರತುಪಡಿಸಿದಂತೆ, ಉಳಿದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳು ಎ.ಆರ್.ಟಿ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮ ವಹಿಸಲು ಆದೇಶಿಸಲಾಗಿದೆ. ಅದರಂತೆ ರಾಜ್ಯದಲ್ಲಿ 4 ವೈದ್ಯಕೀಯ ಕಾಲೇಜುಗಳು ಎ.ಆರ್.ಟಿ. ಕೇಂದ್ರವನ್ನು ಸ್ಥಾಪಿಸಲು ಆಸಕ್ತಿಹೊಂದಿದ್ದು, ಎ.ಆರ್.ಟಿ. ಕೇಂದ್ರವನ್ನು ಸ್ಥಾಪಿಸಲು ಬೇಕಾಗುವ ಕ್ರಮಗಳನ್ನು ಕೈಗೊಳ್ಳುತ್ತಿವೆ.

**ಆರೈಕೆ ಬೆಂಬಲ ಮತ್ತು ಚಿಕಿತ್ಸೆಯ ಸೇವೆಗಳು:**

ಎ.ಆರ್.ಟಿ. ಕೇಂದ್ರದಲ್ಲಿ ಈ ಕೆಳಕಂಡ ಸೌಲಭ್ಯಗಳು ಲಭ್ಯವಿರುತ್ತದೆ :

- ಆಪ್ತಸಮಾಲೋಚನೆ
- ಸಿ.ಡಿ.4 ಕೌಂಟ್ ಪರೀಕ್ಷೆ
- ಮೂಲಭೂತ ತಪಾಸಣೆ
- ಎ.ಆರ್.ಟಿ. ಚಿಕಿತ್ಸೆ
- ಟಿ.ಬಿ. ಕೇಂದ್ರಗಳಿಗೆ ರೆಫರ್ ಮಾಡುವುದು
- ಅವಕಾಶವಾದಿ ಸೋಂಕುಗಳಿಗೆ ಚಿಕಿತ್ಸೆ
- ಹೆಚ್.ಐ.ವಿ.-ಟಿ.ಬಿ. ಗೆ ಚಿಕಿತ್ಸೆ
- ಪಿ.ಪಿ.ಟಿ.ಸಿ.ಟಿ. ಸೌಲಭ್ಯ
- MIS ಮತ್ತು LFU ಕೇಸ್‌ಗಳನ್ನು ಕಂಡು ಹಿಡಿದು ಮತ್ತೆ ಚಿಕಿತ್ಸೆಯನ್ನು ಕೊಡಿಸುವುದು.
- ಸಮಾಜ ಕಲ್ಯಾಣ ಯೋಜನೆಗಳಿಗೆ ಸಂಪರ್ಕಗೊಳಿಸುವುದು
- ಆರೈಕೆ ಮತ್ತು ಬೆಂಬಲ ಕೇಂದ್ರಗಳ ಸಂಪರ್ಕ ಮತ್ತು ಜಿಲ್ಲಾವಾರು ಹೆಚ್.ಐ.ವಿ. ಪಾಸಿಟಿವ್ ನೆಟವರ್ಕಗಳಿಗೆ ಸಂಪರ್ಕ.

ನ್ಯಾಕೋ ಮಾರ್ಗಸೂಚಿಯನ್ವಯ ಜೂನ್ 2017 ರಿಂದ Test & Treat ನಿಯಮವು ಜಾರಿಯಾಗಿದ್ದು, ಇದರ ನಿಯಮದಂತೆ, ಪ್ರತಿ ನೋಂದಾಯಿತ ಹೆಚ್.ಐ.ವಿ. ಸೋಂಕಿತರಿಗೆ, ಅವರ ಸಿ.ಡಿ.4 ಸಂಖ್ಯೆಯನ್ನು ಗಮನದಲ್ಲಿ ಇರಿಸಿಕೊಳ್ಳದೆ, ಎ.ಆರ್.ಟಿ. ಚಿಕಿತ್ಸೆಯನ್ನು ಪ್ರಾರಂಭ ಮಾಡಲಾಗುತ್ತಿದೆ.

**ಕರ್ನಾಟಕದಲ್ಲಿ 2004 ರಿಂದ 2020 ವರೆಗೆ ಕಾರ್ಯನಿರ್ವಹಿಸುತ್ತಿರುವ ಎ.ಆರ್.ಟಿ ಕೇಂದ್ರಗಳು** :

- ಎ.ಆರ್.ಟಿ. ಕೇಂದ್ರಗಳು – 65
- ಲಿಂಕ್ ಎ.ಆರ್.ಟಿ. ಕೇಂದ್ರಗಳು – 311
- ಎ.ಆರ್.ಟಿ. ಪ್ಲಸ್ ಕೇಂದ್ರಗಳು – 10
- ಅನುಪಮ ಸೇವಾ ಕೇಂದ್ರ (CoE) – 01
- ಅನುಪಮ ಸೇವಾ ಕೇಂದ್ರ (PCoE) – 01
- ವೈರಲ್ ಲೋಡ್ ಟೆಸ್ಟಿಂಗ್ – 1 (ನಿಮ್ಹಾನ್ಸ್) + 6 (ಇನ್ನೂ ಪ್ರಾರಂಭಗೊಳ್ಳಬೇಕಾಗಿದೆ.)
- ಸಿ.ಡಿ.4 ಮೆಶಿನ್ - 58

There is gradual scale up of ART centers in Karnataka from 2004 to 2020 (as on March 2020)




In 2004, there were 2 CD4 machine in Karnataka (figure 2). As there was scale up of ART centres, the number of beneficiaries also increased and currently 58 CD4 machines are installed and functional in the State.




•

**ಲಿಂಕ್ ಎ.ಆರ್.ಟಿ. ಕೇಂದ್ರ :**

ಹೆಚ್.ಐ.ವಿ. ಸೋಂಕಿತ ವ್ಯಕ್ತಿಯು ಎ.ಆರ್.ಟಿ. ಚಿಕಿತ್ಸೆಯನ್ನು ಪಡೆಯುತ್ತಿದ್ದು, ಪ್ರತಿ ತಿಂಗಳಿಗೊಮ್ಮೆ ಎ.ಆರ್.ಟಿ. ಕೇಂದ್ರಕ್ಕೆ ಹೋಗಿ ಔಷಧಿ ಪಡೆಯುವುದುರಿಂದ, ಸೋಂಕಿತ ವ್ಯಕ್ತಿಗೆ ಎ.ಆರ್.ಟಿ. ಕೇಂದ್ರದಲ್ಲಿನ ಪ್ರಯಾಣದ ವೆಚ್ಚ, ದೂರದ ಪ್ರಯಾಣದ ಆಯಾಸ ಮತ್ತು ಸಮಯ, ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ನ್ಯಾಕೋ ಹೆಚ್.ಐ.ವಿ. ಸೋಂಕಿತರ ಅನುಕೂಲಕೊಸ್ಕರ ಲಿಂಕ್ ಎ.ಆರ್.ಟಿ. ಕೇಂದ್ರವನ್ನು ಪ್ರತಿ ಜಿಲ್ಲೆಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಕೆಲವೊಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (on the basis of caseload at ICTC) ಸ್ಥಾಪಿಸಲಾಗಿದೆ. ಇದರಿಂದ ಎ.ಆರ್.ಟಿ. ಕೇಂದ್ರದಲ್ಲಿ ನೋಂದಾಯಿತರಾತ ಸೋಂಕಿತ ವ್ಯಕ್ತಿಯು ತಮ್ಮ ಸ್ಥಳಕ್ಕೆ ಹತ್ತಿರವಾದ ಲಿಂಕ್ ಎ.ಆರ್.ಟಿ. ಕೇಂದ್ರಗಳಿಂದ ಎ.ಆರ್.ಟಿ. ಔಷಧಿಗಳನ್ನು ಪಡೆಯಬಹುದಾಗಿರುತ್ತದೆ.

**ಲಿಂಕ್ ಎ.ಆರ್.ಟಿ. ಪ್ಲಸ್ ಕೇಂದ್ರ :**

ಲಿಂಕ್ ಎ.ಆರ್.ಟಿ. ಕೇಂದ್ರದಲ್ಲಿ ಎ.ಆರ್.ಟಿ. ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ ೭೦ ನ್ನೂ ಮೀರಿದರೆ, ಅದನ್ನು ಲಿಂಕ್ ಎ.ಆರ್.ಟಿ. ಪ್ಲಸ್ ಕೇಂದ್ರವೆಂದು ಸಂಸ್ಕರಿಸಲಾಗುತ್ತಿತು ಹಾಗೂ ಈ ಕೇಂದ್ರಕ್ಕೆ ಒಬ್ಬ ಶುಶ್ರೂಷರನ್ನು ನ್ಯಾಕೋ ಮಾರ್ಗಸೂಚಿಯನ್ವಯ ನೇಮಿಸಲಾಗುತ್ತಿತ್ತು. ಅಲ್ಲಿ Pre-ART Registration & ART Care ಸೌಲಭ್ಯವನ್ನು ಒದಗಿಸಲಾಗುತ್ತಿತ್ತು. ಆದರೆ ನ್ಯಾಕೋನ್ವಯ Test & Treat ನಿಯಮವು ಜಾರಿಯಾಗಿದ್ದು, ಅದರಂತೆ ಎಲ್ಲಾ ಹೆಚ್.ಐ.ವಿ. ಸೋಂಕಿತರಿಗೂ ಎ.ಆರ್.ಟಿ. ಚಿಕಿತ್ಸಾ ಸೌಲಭ್ಯ ಸಿಗುವುದರಿಂದ Pre-ART Registration ಇರುವುದಿಲ್ಲ.

ಪ್ರಸ್ತುತ ರಾಜ್ಯದಲ್ಲಿ ೩೧೪ ಲಿಂಕ್ ಎ.ಆರ್.ಟಿ. ಕೇಂದ್ರಗಳು ಇದ್ದು, ಇದರಲ್ಲಿ ೩೦೩ ಲಿಂಕ್ ಎ.ಆರ್.ಟಿ. ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.




**ವೈರಲ್‌ಲೋಡ್ ಪರೀಕ್ಷೆ :**

2018 ರಲ್ಲಿ ನ್ಯಾಕೋ ಮೆಟ್ರೋಪಾಲಿಸ್ ಹೆಲ್ತ್ ಲಿಮಿಟೆಡ್‌ರವರ ಜೊತೆ ಎಲ್ಲಾ ಹೆಚ್.ಐ.ವಿ ಸೋಂಕಿತರನ್ನು ನಿಖರವಾಗಿ ಮೇಲ್ವಿಚಾರಣೆ ಮಾಡುವ ಸಲುವಾಗಿ ವೈರಲ್‌ಲೋಡ್ ಪರೀಕ್ಷಾ ಸೌಲಭ್ಯವನ್ನು ಒದಗಿಸಲು ಒಪ್ಪಂದ ಮಾಡಿಕೊಂಡಿದ್ದು, ರಾಜ್ಯದ ಎಲ್ಲಾ ಎ.ಆರ್.ಟಿ. ಕೇಂದ್ರದಲ್ಲಿ ಕನಿಷ್ಠ 6 ತಿಂಗಳ ಎ.ಆರ್.ಟಿ. ಚಿಕಿತ್ಸೆ ಪಡೆಯುತ್ತಿರುವ ಹೆಚ್.ಐ.ವಿ. ಸೋಂಕಿತರು ಇದರ ಸೌಲಭ್ಯ ಪಡೆಯುತ್ತಿರುತ್ತಾರೆ.

ಹಾಗೆಯೇ, ನ್ಯಾಕೋ ವತಿಯಿಂದ ಕರ್ನಾಟಕ ರಾಜ್ಯಕ್ಕೆ 7 ವೈರಲ್ ಲೋಡ್ ಪರೀಕ್ಷಾ ಕೇಂದ್ರಗಳನ್ನು ಹಂಚಿಕೆ ಮಾಡಲಾಗಿದ್ದು, ಇವು ಒಂದು ಎನ್.ಆರ್.ಎಲ್ ಕೇಂದ್ರಕ್ಕೆ ಮತ್ತು 5 ಎಸ್.ಆರ್.ಎಲ್ ಹಾಗೂ ಒಂದು ವೈದ್ಯಕೀಯ ಕಾಲೇಜುಗಳಲ್ಲಿ ಹಂಚಿಕೆಯಾಗಿರುತ್ತದೆ. ಪ್ರಸ್ತುತ ವೈರಲ್‌ಲೋಡ್ ಪರೀಕ್ಷೆಯು ನಿಮ್ಹಾನ್ಸ್, ಜೆ.ಎನ್.ಎಂ.ಸಿ., ಬೆಳಗಾಂ ಮತ್ತು ಬಿ.ಎಮ್.ಸಿ.ಆರ್.ಐ ಗಳ ಲ್ಯಾಬ್‌ಗಳಲ್ಲಿ ಮಾಡಲಾಗುತ್ತಿದ್ದು, ಉಳಿದ ಕೇಂದ್ರಗಳಾದ ಬಿ.ಎಲ್.ಡಿ.ಇ. ಬಿಜಾಪುರ, ವಿಮ್ಸ್ ಬಳ್ಳಾರಿ, ಸಿಮ್ಸ್-ಶಿವಮೊಗ್ಗ ಮತ್ತು ಜೆ.ಎಸ್.ಎಸ್. ಮೈಸೂರು ಗಳಲ್ಲಿ ವೈರಲ್‌ಲೋಡ್ ಉಪಕರಣವು ಅನುಸ್ಥಾಪಿತವಾಗಿದ್ದು, ನ್ಯಾಕೋವತಿಯಿಂದ ಅನುಮೋದನೆ ಪಡೆದು ಕಾರ್ಯನಿರ್ವಹಿಸುತ್ತವೆ. ನ್ಯಾಕೋ ಆದೇಶನ್ವಯ ರಾಜ್ಯದ ಎ.ಆರ್.ಟಿ. ಕೇಂದ್ರದಲ್ಲಿ

ಚಿಕಿತ್ಸೆ ಪಡೆಯುತ್ತಿರುವ ಹೆಚ್.ಐ.ವಿ. ಸೋಂಕಿತರಿಗೆ ಹಂತ ಹಂತವಾಗಿ 6 ತಿಂಗಳು ಎ.ಆರ್.ಟಿ. ಚಿಕಿತ್ಸೆ ಪಡೆದಿರುವ ಅರ್ಥಿಗಳ ರಕ್ತದ ಮಾದರಿಯನ್ನು ಆಯಾಯ ಎ.ಆರ್.ಟಿ. ಕೇಂದ್ರಗಳ ಸಮೀಪವಾಗಿರುವ ವೈರಲ್‌ಲೋಡ್ ಕೇಂದ್ರಕ್ಕೆ ಲಿಂಕ್ ಮಾಡಲಾಗುವುದು.

**ಮಾರ್ಚ – 2020 ರ ಎ.ಆರ್.ಟಿ. ಕೇಂದ್ರಗಳ ಸಂಚಿತ ವರದಿ :**

ಮಾರ್ಚ-2020 ರ ಸಂಚಿತ ವರದಿಯಂತೆ, 3,46,920 ಹೆಚ್.ಐ.ವಿ. ಸೋಂಕಿತರು ಎ.ಆರ್.ಟಿ. ಕೇಂದ್ರದಲ್ಲಿ ನೊಂದಾಯಿತರಾಗಿದ್ದು, 2,78,221 ರು ಎ.ಆರ್.ಟಿ. ಚಿಕಿತ್ಸೆಯನ್ನು ಪ್ರಾರಂಭಿಸಿದ್ದು, ಇವರಲ್ಲಿ 1,71,288 ಹೆಚ್.ಐ.ವಿ. ಸೋಂಕಿತರು ಎ.ಆರ್.ಟಿ. ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ.




**ಮಾರ್ಚ – 2020 ರ ಎ.ಆರ್.ಟಿ. ಕೇಂದ್ರಗಳ ಹೆಚ್.ಐ.ವಿ. ಸೋಂಕಿತ ಮಕ್ಕಳ ಸಂಚಿತ ವರದಿ :**

ಮಾರ್ಚ-2020 ರ ಸಂಚಿತ ವರದಿಯಂತೆ, 18212 ಹೆಚ್.ಐ.ವಿ. ಸೋಂಕಿತ ಮಕ್ಕಳು ಎ.ಆರ್.ಟಿ. ಕೇಂದ್ರದಲ್ಲಿ ನೊಂದಾಯಿತರಾಗಿದ್ದು, 13776ರು ಎ.ಆರ್.ಟಿ. ಚಿಕಿತ್ಸೆಯನ್ನು ಪ್ರಾರಂಭಿಸಿದ್ದು, ಇವರಲ್ಲಿ 10319 ಹೆಚ್.ಐ.ವಿ. ಸೋಂಕಿತ ಮಕ್ಕಳು ಎ.ಆರ್.ಟಿ. ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ.




**ಸಮಾಜ ಕಲ್ಯಾಣ ಯೋಜನೆಗಳು** : ರಾಜ್ಯದ ಎ.ಆರ್.ಟಿ. ಕೇಂದ್ರಗಳಲ್ಲಿ ಹಾಗೂ ಸಿ.ಎಸ್.ಸಿ. ಕೇಂದ್ರದಲ್ಲಿ ನೋಂದಾಯಿತರಾದ ಹೆಚ್.ಐ.ವಿ. ಸೋಂಕಿತರಿಗೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದಿಂದ ಅನುಷ್ಠಾನಗೊಂಡಿರುವ ಹಲವಾರು ಯೋಜನೆಗಳಿಗೆ ಬಗ್ಗೆ ತಿಳುವಳಿಕೆ ನೀಡಿ ಲಿಂಕ್ ಮಾಡಲಾಗುವುದು. ಹೆಚ್.ಐ.ವಿ. ಸೋಂಕಿತ ಹಾಗೂ ಭಾದಿತ ಮಕ್ಕಳಿಗೆ ರಾಜ್ಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾವತಿಯಿಂದ ಮಾಸಿಕ ರೂ. 750/- ರಿಂದ ರೂ. 1500/- ಗಳ ಆರ್ಥಿಕ ಬೆಂಬಲ ನೀಡುತ್ತಿದೆ.